- ಜೂನ್ ಸಂಚಿಕೆ ಸೊಗಸಾಗಿದೆ; ಆಕರ್ಷಕವಾಗಿದೆ. ಕವಿ ಸಿದ್ಧಲಿಂಗ ಪಟ್ಟಣಶೆಟ್ಟರ ಸಂದರ್ಶನ (ಸಂ: ವಿನಯಾ ಒಕ್ಕುಂದ) ಆತ್ಮೀಯವಾಗಿದ್ದು, ಅಂತಃಕರಣವನ್ನು ತಟ್ಟುತ್ತದೆ. ಮುಕುಂದ ಜೋಶಿ, ಶ್ರೀನಿವಾಸ ಉಡುಪ ಮತ್ತು ಚಂದ್ರಕಾಂತ ಕುಸನೂರರನ್ನು ಕುರಿತ ನೆನಪಿನ ಲೇಖನಗಳು ಆಪ್ತವಾಗಿವೆ.

**ಎಸ್. ಚನ್ನಪ್ಪ, ಮೈಸೂರು**

- ಸಂದರ್ಶನ ಉತ್ತಮವಾಗಿದೆ. ಕತೆ 'ಪ್ಲೇಗ್ ಮತ್ತು ಕ್ವಾರಂಟೈನ್' (ಉರ್ದು ಮೂಲ: ರಾಜೆಂದರ್ ಸಿಂಗ್ ಬೇಡಿ, ಕನ್ನಡಕ್ಕೆ: ಷಾಕಿರಾ ಖಾನಂ) ಇಂದಿನ ಕೊರೊನಾ ತಲ್ಲಣಗಳನ್ನು ಕಣ್ಣೆದುರಿಗೆ ತಂದು ನಿಲ್ಲಿಸಿತು.


**ಬಿ.ಆರ್. ಅಣ್ಣಾಸಾಗರ, ಸೇಡಂ**

- 'ನಿಚ್ಚಂ ಪೊಸತು' ಮಾಲಿಕೆಯಲ್ಲಿ ಕುಮಾರಚಲ್ಯರ ಲೇಖನ 'ನಾಗಚಂದ್ರನ ರಾಮಚಂದ್ರಚರಿತ ಪುರಾಣ' ಓದಿದೆ. ತುಂಬಾ ಹಿಗ್ಗಾಯಿತು. ಹಳಗನ್ನಡ–ನಡುಗನ್ನಡ ಕಾವ್ಯದ ಓದಿನ ಅಗತ್ಯ ಈಗ ತುಂಬಾ ಇದೆ. ಶಾಲಾಕಾಲೇಜಿನಲ್ಲಿ ಈ ಥರದ ಪಾಠಗಳು ಪರಿಣಾಮಕಾರಿಯಾಗಿಲ್ಲ! ಹೀಗಾಗಿ 'ಮಯೂರ'ದ ಕಾಳಜಿಗೆ ಧನ್ಯವಾದಗಳು.

**ಹುರುಕಡ್ಲಿ ಶಿವಕುಮಾರ್, ಬಾಚಿಗೊಂಡನಹಳ್ಳಿ**

- 'ರಾಮಚಂದ್ರಚರಿತ ಪುರಾಣ' ಕುರಿತ ಲೇಖನ ಗಮನಾರ್ಹ. ನಾಗಚಂದ್ರನ ಪ್ರತಿಭೆಗೆ ಈ ಕೃತಿ ಸಾಕ್ಷಿ. ಇದೊಂದು ರಾಮಾಯಣ ಪರಂಪರೆಯ ನೂತನ ವ್ಯಾಖ್ಯಾನದ ಹಾಗಿರುವ ಪ್ರತಿ ಸೃಷ್ಟಿ; ಹೊಸ ನೋಟದ ಬೆಳಕು.

**ವಾಸುದೇವ ನಾಡಿಗ್, ಬೆಂಗಳೂರು**




- ಎಸ್. ದಿವಾಕರ್ ಅವರು ಕನ್ನಡಕ್ಕೆ ಅನುವಾದಿಸಿರುವ ಮೂರು ಅತಿ ಸಣ್ಣಕತೆಗಳು ಆಪ್ತವೆನಿಸುತ್ತವೆ.

**ಟಿ.ಎಸ್. ರಾಜೇಂದ್ರಪ್ರಸಾದ್, ತೇಕಲವಟ್ಟಿ**

- ಕತೆ 'ಒಂದು ದಿನ ನಾನವನ ಹೆಸರಿನಲ್ಲಿ...' (ಎಂ.ಎಸ್. ವೇದಾ) ಓದಿದ ಮೇಲೆ ಮತ್ತೆ ಮತ್ತೆ ಕಾಡುತ್ತಲೇ ಇದೆ.

**ರಾಜಲಕ್ಷ್ಮಿ, ಬೆಂಗಳೂರು**

- 'ಸಂಬಂಧ' (ಟಿ.ಎಂ. ಸುಬ್ಬರಾಯ)ಕತೆಯ ಓದು ತಡೆರಹಿತ ಸುಗಮ ಪಯಣದಂತೆ ಸಾಗುತ್ತದೆ.

**ಸುಮನಾ, ಬೆಂಗಳೂರು**

- ಚಿದಾನಂದ ಸಾಲಿಯವರ 'ಆಧುನಿಕ ಸಂಜಯ'ನ ಮಹಾಭಾರತ!' ಪ್ರಬಂಧ ಮನೋಜ್ಞವಾಗಿದೆ.

**'ಮೊಹರು' ಇಲಕಲ್**

- 'ಮುಕ್ತ ಹಾಜರಿ: ಮುಕುಂದ ಜೋಶಿ' ಲೇಖನದಲ್ಲಿ ತಮ್ಮ ಗೆಳೆಯನನ್ನು ಜಯಂತ ಕಾಯ್ಕಿಣಿ ಆಪ್ತವಾಗಿ ಚಿತ್ರಿಸಿದ್ದಾರೆ.

**ಗುರುದೇವ್ ಭಂಡಾರ್ಕರ್, ಹೊಸನಗರ**